ಅಧಿಕಾರಿಯ ಬಂಗ್ಲೆ ಓಬುಕೋವ್ ಸೇತುವೆಯ ಆಚೆಗೆ ಒಂದು ಸುಸಜ್ಜಿತ ಪ್ರದೇಶದಲ್ಲಿತ್ತು. ಅಕಾಕಿ ಅಂಧಕಾರದ ಗಲ್ಲಿಗಳನ್ನು ಹಾದು ಓಬುಕೋವ್ ಸೇತುವೆಯನ್ನು ದಾಟಿ ಆ ಬಂಗ್ಲೆಗೆ ಹೋದಾಗ ಅಲ್ಲಿಯ ಥಳಕು ಬಳಕನ್ನು ಕಂಡು ದಿಗ್ಭ್ರಮೆ ಗೊಂಡ. ಸಂಜೆ ತಾರುಣ್ಯವನ್ನೇ ತಾಳಿತ್ತು. ಮೇಲಿನ ಅಧಿಕಾರಿಯ ಮನೆಯಲ್ಲಿ ಸಡಗರವೋ ಸಡಗರ! ಎಲ್ಲೆಲ್ಲೂ ವೋದಕಾದ ಪರಿಮಳ ವಾತಾವರಣದಲ್ಲಿ ಪಸರಿಸಿತ್ತು. ಅಕಾಕಿ ಒಬ್ಬ ಸ್ನೇಹಿತನ ಪಕ್ಕದಲ್ಲಿ ಬಂದು ಕೂತು ಸಲಾಡ್, ಪೇಸ್ಟ್ರಿ, ವೀಲ್ನೊಂದಿಗೆ ವೋದಕಾ ಮಜವನ್ನು ಅನುಭವಿಸಲು ಆರಂಭಿಸಿದ. ಅವನು ತನ್ನ ಜೀವನದಲ್ಲಿ ಮೊದಲ ಬಾರಿಗೆ ಇಂಥ ಸಮಾರಂಭದ ಮಜವೇನೆಂಬುದನ್ನು ಅರಿತ.

ತಡ ರಾತ್ರಿಯಾಗಿದೆ. ಒಬ್ಬೊಬ್ಬರಾಗಿ ಎಲ್ಲರೂ ಮನೆಗೆ ಹೊರಡಲಾರಂಭಿಸಿದರು. ಅಕಾಕಿ ಸಹ ತನ್ನ ಮನೆಯ ಕಡೆಗೆ ಹೊರಟ. ಈಗ ರಸ್ತೆಯಲ್ಲಿ ವಿದ್ಯುತ್ ಬೆಳಕು ಮಂದವಾಗಿತ್ತು. ಯಾವುದೋ ಒಂದೊಂದು ಮನೆಯಿಂದ ಬೆಳಕು ಸೀಳಿ ಬರುತ್ತಿತ್ತು. ಅವನು ಆ ಪ್ರದೇಶದಿಂದ ದೂರವಾದಂತೆ, ಅಂಧಕಾರವೂ ಅವನನ್ನು ಹಿಂಬಾಲಿಸಿತು. ಈ ಅಂಧಕಾರದಲ್ಲಿಯೇ ಅವನು ಓಬುಕೋವ್ ಸೇತುವೆಯ ಮೇಲೆ ಬಂದಾಗ ಒಮ್ಮೆಲೆ ನಿಂತುಬಿಟ್ಟ. ನೆರಳೊಂದು ಅವನೆದುರು ನಿಂತಿತ್ತು. ಅವನು ಪಕ್ಕಕ್ಕೆ ಸರಿದುಕೊಳ್ಳಲು ಹೋದಾಗ, ಇನ್ನಿಬ್ಬರು ಅವನ ಅಕ್ಕಪಕ್ಕ ನಿಂತರು. ಅವರು ಮಾತನಾಡದೆ ಅವನ ಕೋಟನ್ನು ಕಳಚಿಕೊಂಡು ಕತ್ತಲಿನಲ್ಲಿ ಕಣ್ಮರೆಯಾದರು. ಅಕಾಕಿ ದಂಗಾದ, ಅವನ ಬಾಯಿಂದ ಚೀರಾಟವಿರಲಿ, ಅವನು ತನ್ನ ತುಟಿಗಳನ್ನೂ ಎರಡು ಮಾಡದಾದ.

ಮರುದಿನ ಅಕಾಕಿ ತನ್ನ ಅದೇ ಹಳೆಯ ಕೋಟನ್ನು ಧರಿಸಿ ಕಚೇರಿಗೆ ಹೋದ. ತನ್ನ ಸಹೋದ್ಯೋಗಿಗಳಿಗೆ ನಿನ್ನೆ ರಾತ್ರೆಯ ಘಟನೆಯನ್ನು ಹೇಳಿದ. ಅವರು ಅವನಿಗೆ ಸಮಾಧಾನವನ್ನು ಹೇಳಿ, ಜಮಾದಾರ ಮತ್ತು ಇನ್ಸ್‌ಪೆಕ್ಟರ್‌ನಿಂದ ಕೆಲಸವಾಗುವುದಿಲ್ಲ, ನೇರವಾಗಿ ಹಿರಿಯ ಅಧಿಕಾರಿಗೆ ದೂರು ಸಲ್ಲಿಸುವಂತೆ ಸೂಚಿಸಿದರು. ಅಕಾಕಿ ಮೊದಲು, ತಾನು ಹಿರಿಯ ಅಧಿಕಾರಿಯ ಬಳಿಗೆ ಹೋಗಲು ಹಿಂಜರಿದ. ಆದರೆ ಸಹೋದ್ಯೋಗಿಗಳು ಧೈರ್ಯ ಹೇಳಿದಾಗ ಅವನು ಹಿರಿಯ ಅಧಿಕಾರಿಯ ಬಳಿಗೆ ಹೋದ. ಹಿರಿಯ ಅಧಿಕಾರಿಯ ಬಳಿ ದೊಡ್ಡ ಅಧಿಕಾರವಿರದಿದ್ದಾಗ್ಯೂ ಅವನು ಹಿರಿಯ ಅಧಿಕಾರಿಯೇ ಆಗಿರುತ್ತಾನೆ. ಅವನು ಒಬ್ಬ ಸಾಮಾನ್ಯ ಗುಮಾಸ್ತನನ್ನು ತಕ್ಷಣ ಒಳಗೆ ಹೇಗೆ ಬಿಟ್ಟುಕೊಳ್ಳುತ್ತಾನೆ? ಕೆಲವು ಗಂಟೆಗಳು ಕಳೆದ ನಂತರ ಅಕಾಕಿಯನ್ನು ಒಳಗೆ ಬಿಡಲಾಯಿತು. ಹಿರಿಯ ಅಧಿಕಾರಿ ಅವನ ಮಾತನ್ನು ಕೇಳಿದೊಡನೆಯೇ ಕೆಂಡ ಕಾರಿದ, 'ನೀನು ಯಾರ ಹತ್ತಿರ ಮಾತನಾಡುತ್ತಿದ್ದೀಯ ಎಂಬುದು ನಿನಗೆ ಗೊತ್ತಾ? ನೀನು ಈಗ ಯಾರ ಎದುರಿಗೆ ನಿಂತಿದ್ದೀಯಾ ಎಂಬುದು ನಿನಗೆ ಗೊತ್ತಾ? ನಿನ್ನನ್ನು ಯಾರು ಒಳಗೆ ಬರಲು ಬಿಟ್ಟರಿದ್ದು...ನೇರವಾಗಿ ಇಲ್ಲಿಗೆ ಬರುವ ಧೈರ್ಯ ನಿನಗೆ ಹೇಗೆ ಬಂತು?'

ಪಾಪದ ಅಕಾಕಿಗೆ ದಿಕ್ಕೇ ತೋಚದಂತಾಯಿತು. ಅವನ ಬಾಯಿ ಕಟ್ಟಿತು. ಮೇಲಧಿಕಾರಿಯ ಕೂಗಾಟ ಕೇಳಿ ಒಳಗೆ ಬಂದ ಇಬ್ಬರು ಸಹಾಯಕರು ಅಕಾಕಿಯನ್ನು ಹಿಡಿದುಕೊಂಡು ಹೊರಗೆ ಕರೆ ತರದಿದ್ದರೆ ಅವನು ಪ್ರಜ್ಞೆ ತಪ್ಪಿ ಬೀಳುತ್ತಿದ್ದ. ಅಕಾಕಿಗೆ ತಾನು ಮನೆಗೆ ಹೇಗೆ ಬಂದೆ, ಹೇಗೆ ಮಂಚ ದಲ್ಲಿ ಹೊರಳಿದೆ ಎಂಬುದು ತಿಳಿಯಲಿಲ್ಲ. ಅವನು ಎರಡು ದಿನ ಜ್ವರದಿಂದ ಬಳಲಿದ. ಸದ್ಯ, ಮನೆಯ ಮಾಲೀಕ ಅವನ ನರಳಾಟ ಕೇಳಿ ವೈದ್ಯರನ್ನು ಕರೆತಂದ. ವೈದ್ಯರು ಅವನ ದಯನೀಯ ಸ್ಥಿತಿಯನ್ನು ನೋಡಿ ಹೇಳಿದರು, 'ಇವನಿಗೆ ಔಷಧವಲ್ಲ, ಶವದ ಪೆಟ್ಟಿಗೆಯ ಅಗತ್ಯವಿದೆ. ಇವನು ಕೆಲವು ಕೆಲವು ಗಂಟೆಗಳ ಅತಿಥಿ ಮಾತ್ರ.'

* * *

ಅಕಾಕಿ ಅಕಾಕೀವಿಚ್‌ನ ಕಥೆ ಇಲ್ಲಿಗೆ ಕೊನೆಗೊಳ್ಳಲಿಲ್ಲ ಎಂಬುದನ್ನು ಕೇಳಿ ನಿಮಗೆ ಆಶ್ಚರ್ಯ ವಾಗಬಹುದು. ಓಬುಕೋವ್ ಸೇತುವೆಯ ಬಳಿ ಅಕಾಕಿ ಅಕಾಕೀವಿಚ್‌ನ ಕೋಟನ್ನು ಕಸಿದು ಕೊಂಡು ಹೋದ ಜಾಗದಲ್ಲಿ ರಾತ್ರಿಯ ವೇಳೆ ಪ್ರೇತವೊಂದು ದಾರಿಹೋಕರ ಕೋಟನ್ನು ತುಂಡರಿಸುತ್ತಾ ಅಲೆಯುತ್ತಿರುತ್ತದೆ ಎಂಬ ವಿಷಯ ಎಲ್ಲೆಡೆ ವ್ಯಾಪಿಸಿತು. ಜನ ಅದು ಅಕಾಕಿ ಅಕಾಕೀವಿಚ್‌ನ ಪ್ರೇತ, ನಾವು ಅದನ್ನು ಕಣ್ಣಾರೆ ಕಂಡಿದ್ದೇವೆ ಎಂದು ಹೇಳುತ್ತಾರೆ.

ಒಂದು ರಾತ್ರಿ ಅಕಾಕಿ ಅಕಾಕೀವಿಚ್‌ನನ್ನು ಗದರಿಸಿದ್ದ ಅದೇ ಮೇಲಧಿಕಾಗಿ ಆ ಸೇತುವೆಯಿಂದ ಹಾದು ಹೋಗುತ್ತಿದ್ದ. ಅಕಸ್ಮಾತ್ ಅವನ ಕುತ್ತಿಗೆಯನ್ನು ಕೈಯೊಂದು ಹಿಡಿದು, ಅವನ ಕಾಲರನ್ನು ಒತ್ತಿ ಹಿಡಿಯಿತು. ಅವನು ಹಿಂದುರಿಗಿ ನೋಡಿದಾಗ ಅವನಿಗೆ ಆಶ್ಚರ್ಯವಾಯಿತು. ಅದೇ ಗಿಡ್ಡ ದೇಹದ, ತೆಳು ಕಾಯದ ಮನುಷ್ಯ....ಅದೇ ಹರಿದಹಳೆಯ ಕೋಟು...ಅವನ ಶರೀರದಿಂದ ಹಳೆಯ ಸಮಾಧಿಯ ದುರ್ಗಂಧ ಬಡಿಯುತ್ತಿತ್ತು. ಅವನು ಉರಿಯುವ ಕಣ್ಣುಗಳಿಂದ ಮೇಲಧಿಕಾರಿಯನ್ನೇ ನೋಡುತ್ತಿದ್ದ. ಅವನ ಬಾಯಿಯಿಂದಲೂ ದುರ್ಗಂಧ ಬರುತ್ತಿತ್ತು; ಅವನು ಮೇಲಧಿಕಾರಿಯನ್ನು ದುರುಗುಟ್ಟಿ ನೋಡುತ್ತಾ ಹೇಳಿದ, 'ಓಹ್, ಕಡೆಗಂತೂ ನೀನಿಲ್ಲಿಗೆ ಬಂದೆ. ನಾನು ಇದೇ ಕೋಟಿಗಾಗಿ ಕಾಯುತ್ತಿದ್ದೆ. ನೀನು ನನ್ನನ್ನು ಧಿಕ್ಕರಿಸಿದ್ದೆ, ಆದರೆ ನನಗೀಗ ನಿನ್ನ ಈ ಕೋಟು ಬೇಕು.' ಅಧಿಕಾರಿ ತಕ್ಷಣ ಕೋಟನ್ನು ಕಳಚಿ ಎಸೆದು, ಮನೆಯ ಕಡೆಗೆ ಓಡಿದ. ನಂತರ ಸೇತುವೆಯ ಆ ಪ್ರೇತ ಯಾರ ಕಣ್ಣಿಗೂ ಬೀಳಲಿಲ್ಲ ವೆಂದು ಹೇಳಲಾಗುತ್ತದೆ. ಅಲ್ಲದೆ, ಆ ಮೇಲಧಿಕಾರಿ ಈಗ ಎಂದೂ, ಯಾರಿಗೂ ಗದರಿಸಿ ಮಾತನಾಡುವುದಿಲ್ಲವೆಂದೂ ಹೇಳಲಾಗುತ್ತದೆ. ■



# ಮೇಷ್ಟ್ರು

■ ಸುಧಾ ವೈ.ಎಂ. ತೀರ್ಥಹಳ್ಳಿ

ದಿಢ್ಡೆಂದು ಬಿದ್ದ ಸದ್ದಿಗೆ ರಾತ್ರಿ ಒಂಭತ್ತಾದರು ಮನೆ ಸೇರದಿದ್ದ ಅಂಗಡಿ ಹೋಟೆಲ್‌ಗಳಿದ್ದ ಚೆನ್ನೂರಿನ ಕೆಲ ಜನರು ಅರಚಾಟದ ಧ್ವನಿ ಕೇಳುತ್ತಿದ್ದಲ್ಲಿಗೆ ನಾಮುಂದು ತಾಮುಂದೆಂದು ಓಡುತ್ತಿದ್ದರು. ಆ ದಿಕ್ಕಿಗೆ ಸೀತಾಳು ಗಾಬರಿಯಿಂದ ಓಡಿದಳು. ಅಲ್ಲಿ ನೋಡಿದರೆ ಶಾಲೆಯ ಪಕ್ಕದ ಧರೆ ಕುಸಿದು ಸೀತಾಳ ಶಾಲೆಯ ಮೇಷ್ಟ್ರು ಮಣ್ಣೊಳಗೆ ಪ್ರಜ್ಞಾಹೀನ ಸ್ಥಿತಿಯಲ್ಲಿ ಬಿದ್ದಿದ್ದಾರೆ. ಉಸಿರಾಟ ಕ್ರಿಯೆ ಗೊತ್ತಾಗದಷ್ಟು ಮಣ್ಣಿನ ರಾಶಿ ರಾಶಿಯೇ ಬೆನ್ನ ಮೇಲೆ ಬಿದ್ದಿದೆ. ಮಣ್ಣು ಸರಿಸಿ ಮೇಷ್ಟ್ರನ್ನ ಮೇಲೆತ್ತುವಾಗ ಊರ ಜನರ ಕೂಗಾಟ ಕಿರುಚಾಟ ಮುಗಿಲು ಮುಟ್ಟಿತ್ತು. ಮೇಷ್ಟ್ರ ನರಳಾಟದ ಕ್ಷೀಣ ದನಿ ಅವರ ಜೀವವಿದೆ ಎನ್ನುವುದನ್ನು ಖಚಿತಪಡಿಸುತ್ತಿತ್ತು. ಸ್ವಲ್ಪ ಹೊತ್ತಿಗೆ ಚೆನ್ನೂರಿನ ಗೌಡ್ರು ತಮ್ಮ ಕಾರಿನಲ್ಲಿ ಮೇಷ್ಟ್ರನ್ನ ಶಿವಮೊಗ್ಗದ ಆಸ್ಪತ್ರೆಗೆ ಸಾಗಿಸಿದರು. ಜನರ ಗುಂಪು ಮೇಷ್ಟ್ರಿಗೆ ಅಂಥ ದುರಾಭ್ಯಾಸ ಏನು ಇದ್ದಹಾಗೆ ಇರಲಿಲ್ಲ. ಬ್ಯಾಟರಿ ಬೆಳಕಿಲ್ಲದೆ ಕತ್ತಲಲ್ಲಿ ಹೋಗಿ ಧರೆಯ ತುದಿ ಕಾಲಿಟ್ಟಿರುವುದೇ ಇಪ್ಪತ್ತು ಅಡಿ ಪಾತಾಳಕ್ಕೆ ಬೀಳಲು ಕಾರಣ ಇರಬಹುದು ಎನ್ನುತ್ತಲೇ ನಾನಾ ತರಹದ ಊಹಾಪೋಹದ ಮಾತಲ್ಲಿ ಮುಳುಗಿದ್ದರು. ಹೊತ್ತಾಗುತ್ತಿದ್ದಂತೆ ಹಿರಿಯರೆಲ್ಲ ಸೇರಿ ಮಕ್ಕಳನ್ನ ಮನೆಗಳಿಗೆ ಅಟ್ಟದರು. ಇಲಿ ಹೋಯಿತೆಂದರೆ ಹುಲಿ ಹೋಯಿತೆಂದು ಭಾವಿಸಿ ಮಾತನಾಡುವ ಜನರ ಮಾತುಗಳನ್ನು ಆಲಿಸುವುದು ಮಕ್ಕಳಿಗೆ ಒಂದು ತರಹದ ಸ್ವರ್ಗ ಸುಖ.

ವೆಂಕಟೇಶ್ವರ ಮೇಷ್ಟ್ರ ದಾರುಣ ಸ್ಥಿತಿಗೆ ತತ್ತರಿಸಿದ ಸೀತಾಗೆ ರಾತ್ರಿ ಮಲಗಿದರೆ ನಿದ್ದೆಯೆ ಬರಲಿಲ್ಲ.ಮೇಷ್ಟ್ರಿಗೆ ಸಂಬಂಧಿಸಿದ ಅನೇಕ ವಿಷಯಗಳು ಆ ರಾತ್ರಿ ಸೀತಾಳಿಗೆ ನೆನಪಾಗುತ್ತಲೆ ಇದ್ದವು.ಮೇಷ್ಟ್ರಿಗೆ ಮಕ್ಕಳಿಲ್ಲದ ಕಾರಣಕ್ಕೆ ದತ್ತು ಮಗನನ್ನು ಸಾಕುತ್ತಿದ್ದರು. ಪ್ರತಿ ತಿಂಗಳು ಸಂಬಳದ ದಿನ ಬಂದಾಗ ಸೀತಾಳ ತಂಡಕ್ಕೆ 'ನಮ್ಮನೆಗೆ ಹೋಗಿ ಮಲಗಿರಿ'ಎನ್ನುವ ಕರೆ ಮೇಷ್ಟ್ರಿಂದ ಬರುತಿತ್ತು. ಸೀತಾಳಿಗೆ ಹೇಳಿದ ಮೇಲೆ ಕೇಳಬೇಕೆ? ತನ್ನ ಗುಂಪಿನ ಆಶಾ, ಲತಾ, ಶಕು ಅವರೊಂದಿಗೆ ರಾತ್ರಿ ಮೇಷ್ಟ್ರ ಹೆಂಡತಿ ಪುಷ್ಪಕ್ಕನ ಕಾವಲಿಗೆ ಹೋಗುತ್ತಿದ್ದರು. ಅಲ್ಲಿ ಹಾಡು, ಡ್ಯಾನ್ಸು, ಚೆನ್ನೆಮಣೆ, ಪಗಡೆಯಾಟ ಹೀಗೆ ಹಲವು ಹತ್ತು ಸ್ಪರ್ಧೆಗಳನ್ನು ಮಾಡಿ ಮಕ್ಕಳು ಸಂತೋಷ ಪಡುತ್ತಿದ್ದರು. ಕನ್ನಡ ಬರದ ಪುಷ್ಪಕ್ಕ ತೆಲುಗಿನ ಭಕ್ತಿ ಗೀತೆಗಳನ್ನು ಹೇಳಿ ಮಕ್ಕಳನ್ನ ಮಲಗಿಸಿ, ತಾವು ಮೇಷ್ಟ್ರ ನಿರೀಕ್ಷೆಯಲ್ಲಿ ಕುಳಿತಿರುತ್ತಿದ್ದರು. ರಾತ್ರಿ ಮೇಷ್ಟ್ರು ಬಂದೊಡನೆ ಊಟ ಬಡಿಸಿ,ಮೇಷ್ಟ್ರು ಮಲಗಿದೊಡನೆ ಕಾಲು ಒತ್ತುತ್ತ ಕುಳಿತು ಕೊಳ್ಳುತ್ತಿದ್ದ ಪುಷ್ಪಕ್ಕ ಯಾವಾಗ ಮಲಗುತ್ತಿದ್ದರೊ?

ವೆಂಕಟೇಶ್ವರ ಮೇಷ್ಟ್ರು ಚೆನ್ನೂರಿಗೆ ಬಂದ ಮೇಲೆ ಊರಿನವರು ಗಮನಿಸುವಂತ ಅನೇಕ ಕಾರ್ಯಗಳನ್ನು ಮಾಡುತ್ತಲೇ ಇದ್ದರು. ರಜೆ ಬಂದರೆ ತಮ್ಮ ಊರು ಕೋಲಾರದ ಮಾಲೂರಿಗೆ ಹೋದದ್ದೇ ಕಡಿಮೆ. ಮಕ್ಕಳಿಗೆ ಪಾಠ, ಶಾಲಾ ಕೈತೋಟ, ತೆಂಗಿನ ತೋಟ ಮಾಡುವುದು ನೀರು,ಗೊಬ್ಬರ ಹಾಕುವುದು ಹೀಗೆ ಹತ್ತಾರು ಕಾರ್ಯ ಗಳಲ್ಲಿ ಬಿಡುವಿಲ್ಲದಂತೆ ತೊಡಗಿಸಿಕೊಳ್ಳುತ್ತಿದ್ದರು. ಶಾಲೆಯಲ್ಲಿನ ಮರ ಗಿಡಗಳನ್ನು ವಿದ್ಯಾರ್ಥಿಗಳ ಗುಂಪಿಗೆ